**ದಿನಾಂಕ 12.10.2018 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಬಿ.ಎನ್.ಆರ್. ವಕೀಲರಿಂದ**

ನಾನು ಸರ್ವೆ ನಂಬರ್ 34/7 ರಲ್ಲಿ ಜಮೀನನ್ನು ಕೊಂಡುಕೊಂಡಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 34/7 ಮಹಾದೇವಯ್ಯುವರ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ. ನಾನು ಕ್ರಯ ಪತ್ರ ಬರೆಸಿಕೊಳ್ಳುವ ಪೂರ್ವದಲ್ಲಿ ನನಗೆ ಕ್ರಯ ಪತ್ರ ಮಾಡಿಕೊಟ್ಟವರಿಂದ ಜಮೀನಿಗೆ ಸಂಬಂಧಿಸಿದ ಮೂಲ ದಾಖಲಾತಿಗಳನ್ನು ನಾನು ಪಡೆದುಕೊಳ್ಳಲಿಲ್ಲ. ನಾನು ಜಮೀನಿಗೆ ಸಂಬಂಧಿಸಿದ ವಿಭಾಗ ಆಗದ ಬಗ್ಗೆ ಮೂಲ ದಾಖಲಾತಿಗಳನ್ನು ನಾನೇ ಸ್ವತಃ ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಈ ದಾವೆಯನ್ನು ವಾದಿ ದಾಖಲೆ ಮಾಡುವ ಪೂರ್ವದಲ್ಲೆ ಕ್ರಯ ಪತ್ರ ನನ್ನ ಹೆಸರಿಗೆ ಆಗಿತ್ತು. ಯಾವ ದಿನಾಂಕದಂದು ನನ್ನ ಹೆಸರಿಗೆ ಪತ್ರ ಆಗಿದೆ ಎಂದು ನನಗೆ ಗೊತ್ತಿಲ್ಲ ನನಗೆ ಬರೆದುಕೊಟ್ಟಿರುವ ಪತ್ರಕ್ಕೆ ವಾದಿಗಳು ಸಹಿ ಮಾಡಿಲ್ಲ ಎಂದರೆ ಸರಿ. ದಿನಾಂಕ **09.09.2008** ಕ್ಕೂ ಮೊದಲೇ ವಾದಿಗಳು ಈ ದಾವೆಯನ್ನು ದಾಖಲೆ ಮಾಡಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವೆ ದಾಖಲಾಗುವ ವಿಚಾರ ಗೊತ್ತಿದ್ದರೂ ಶಿವರಾಜು ಮತ್ತು ಇತರರ ಜೊತೆ ಸೇರಿ ಕ್ರಯ ಪತ್ರ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಖರೀದಿಸಿರುವ ಜಮೀನಿಗೆ ಸಂಬಂಧಿಸಿರುವ ಖಾತೆಯ ಕಂದಾಯ ಪಾವತಿ ರಶೀದಿಗಳನ್ನು ನಾನು ಪಡೆದುಕೊಳ್ಳಲಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನನಗೆ ಮಾರಾಟ ಮಾಡಿರುವ ಮಾರಾಟಗಾರರು ಖಾತೆ ಕಂದಾಯ ಹೊಂದಿದ್ದರು ಎಂದು ಬರೆಸಿಲ್ಲ. ನಾನು ಸಲ್ಲಿಸಿರುವ ಪ್ರಮಾಣ ಪತ್ರಿಕೆ ಯಾರು ತಯಾರಿಸಿದ್ದಾರೆಂದು ನನಗೆ ಗೊತ್ತಿಲ್ಲ. ನಾನು ಆ ಪ್ರಮಾಣ ಪತ್ರಕ್ಕೆ ಮಾತ್ರ ಸಹಿ ಮಾಡಿದ್ದೇನೆ. ಪ್ರಮಾಣ ಪತ್ರದಲ್ಲಿ ಏನೆಲ್ಲಾ ವಿಚಾರಗಳು ಬರೆದಿವೆ ಎಂದು ನಾನು ಇಲ್ಲಿಯವರೆಗೂ ತಿಳಿದುಕೊಂಡಿಲ್ಲ. ಶಿವರಾಜುರವರ ಮಗ ಉಮೇಶರವರನ್ನು ದತ್ತು ತೆಗೆದುಕೊಂಡಿರುವ ವಿಚಾರ ಮತ್ತು ದಾಖಲೆಯನ್ನು ನಾನು ನೋಡಿಲ್ಲ. ಯಾವ ದಿನಾಂಕದಲ್ಲಿ ಏನು ಆಗಿತ್ತು ಎಂದು ನಾನು ತಿಳಿದುಕೊಳ್ಳಲಿಲ್ಲ. ದತ್ತು ವಿಚಾರದ ಬಗ್ಗೆ ನನ್ನ ಪ್ರಮಾಣ ಪತ್ರಿಕೆಯಲ್ಲಿ ಬರೆಸಿಲ್ಲ. ಲೇಟ್ ಮಹದೇವಯ್ಯನವರಿಗೆ ಮಕ್ಕಳಿರಲಿಲ್ಲ ಎಂದರೆ ಸರಿ. ಚಿಕ್ಕಮಲ್ಲಮ್ಮ ಎಂಬುವವರು ಮಹದೇವಯ್ಯನವರ ಹೆಂಡತಿ ಎಂದರೆ ಸರಿ. ಚಿಕ್ಕಮಲ್ಲಮ್ಮ ಎಂಬುವವರು ಕಾರ್ತಿಕ್ ಎಂಬ ವ್ಯಕ್ತಿಯನ್ನು ನೊಂದಣಿ ಮೂಲಕ ದತ್ತು ಪಡೆದುಕೊಂಡಿದ್ದಾರೆ ಎಂದರೆ ಸರಿ. ನನಗೆ ಪತ್ರ ಆದ ದಿನ ಒಟ್ಟು 3 ಪತ್ರಗಳನ್ನು ಶಿವರಾಜು ಎಂಬುವವರು ಬರೆದುಕೊಟ್ಟರು. ಆ 3 ಕ್ರಯ ಪತ್ರಗಳು ನಾನು ಪಡೆದುಕೊಂಡಿರುವ ಆಸ್ತಿಗಳಿಗೆ ಸಂಬಂಧಿಸಿದ ಕ್ರಯ ಪತ್ರಗಳು ಎಂದರೆ ಸರಿ. ವಾದಿಗಳಿಗೆ ನಾನು

ಬರೆಸಿಕೊಂಡಿರುವ ಸ್ವತ್ತಿನ ಮೇಲೆ ಹಿಸ್ಸೆಯ ಹಕ್ಕು ಇದೆ ಎಂದರೆ ಸರಿ. ವಾದಿಗಳಿಗೆ ಇರುವ ಹಕ್ಕನ್ನು ನಿರಾಕರಿಸಿ ಶಿವರಾಜು ಮತ್ತು ಅವರ ಮಕ್ಕಳುಗಳ ಜೊತೆ ಶರಿಕ್ಕಾಗಿ ಕ್ರಯ ಪತ್ರವನ್ನು ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಮೋಸದಿಂದ ಕ್ರಯ ಪತ್ರವನ್ನು ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಅದರ ಆಧಾರದ ಮೇಲೆ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

**ಜೆಎಂಎಫ್‌ಸಿ., ಹೊಳೆನರಸೀಪುರ.**